ಸಾರಿಗೆ ಬಸ್ಸುಗಳು ಗುಜರಿಗೆ ಯೋಗ್ಯವಾಗಿದ್ದರೂ, ಕಿಟಕಿಯಲ್ಲಿ ಪ್ರಕಟವಾಗುವ ಸುಂದರ ಮುಖಗಳಿಂದಾಗಿ ಇಂದಿನ (ಇಂದ್ರನ) ಐರಾವತದಂತೆ ಕಾಣುತ್ತಿದ್ದವು. ದಿನಕರ ದೇಸಾಯಿಯವರ ಪ್ರಭಾವ ದಟ್ಟವಾಗಿದ್ದ ಆ ಕಾಲದಲ್ಲಿ ಅವರೆಲ್ಲ ಚುಟುಕಗಳನ್ನು ಗೀಚುತ್ತಾ 'ಕವಿಗೋಷ್ಠಿ' ನಡೆಸುತ್ತಿದ್ದದ್ದೂ ಈ ಮರದ ನೆರಳಿಗೇ ಆಗಿತ್ತು!

ಹೊಸಬಣ್ಣ ಮತ್ತು ಆನಂದು ಸಾಗುವಾನಿ ಮರವು ಫ್ರೇಮಿನಲ್ಲಿ ಬರುವ ಹಾಗೆ ಸೆಲ್ಫಿ ತೆಗೆದುಕೊಂಡಿದ್ದರು. ಒಂದು ಕಾಲದಲ್ಲಿ ಭರಪೂರು ಎಲೆ ಹೇರಿಕೊಂಡು ನಳನಳಿಸುತ್ತಿದ್ದ ಮರ ಸೊರಗಿಂತೆ ಕಂಡಿತ್ತು. ಬಸ್‌ಸ್ಟ್ಯಾಂಡ್ ನವೀಕರಣದ ಭಾಗವಾಗಿ ಪಕ್ಕದಲ್ಲಿ ಹೊಸ ಕಟ್ಟಡ ನಿರ್ಮಾಣದ ಹಂತದಲ್ಲಿತ್ತು. 'ಆಧುನೀಕರಣಗೊಳ್ಳುವ ಭರದಲ್ಲಿ ಈ ಮರಕ್ಕೆ ಕೊಡಲಿ ಬೀಳದಿದ್ದರೆ ಸಾಕು ಮಾರಾಯ', ಎಂದು ಅವರಾಡಿಕೊಂಡ ಮಾತನ್ನು ಕೇಳಿಸಿಕೊಂಡವರೊಬ್ಬರು, 'ಬಿಲ್ಡಿಂಗ್ ಹಿಂದ್ಬದಿಗೆ ಕಟ್ತರಂತೆ, ಮರಕ್ಕೇನು ಕುತ್ತಿಲ್ಲ ಅಂತಾರಪ್ಪ' ಎಂದಾಗ ತುಸು ಸಮಾಧಾನವಾಗಿತ್ತು. ಆದರೂ ನಿಂತಲ್ಲೇ 'ಸೇವ್ ಸಾಗುವಾನಿ ಟ್ರೀ: ಸೇವ್ ಸ್ವೀಟ್ ಮೆಮೊರೀಸ್' ಎಂಬ ವಾಟ್ಸಾಪ್ ಗ್ರುಪ್ ಕ್ರಿಯೇಟ್ ಮಾಡಿ, ಇಬ್ಬರ ಕಾಂಟ್ಯಾಕ್ಟ್ ಲಿಸ್ಟಲ್ಲಿರುವ ಗೆಳೆಯರನ್ನು ಆ್ಯಡ್ ಮಾಡಿದ್ದರು.

'ನಮ್ಮ ಅಂಕೋಲಿ ಬಸ್‌ಸ್ಟ್ಯಾಂಡ್ ನಡುವಿರುವ ಸಾಗುವಾನಿ ಮರಕ್ಕೆ ನಮ್ಮೆಲ್ಲರ ನೆನಪಿನೆಳೆಗಳು ಸುತ್ತಿಕೊಂಡಿರುವುದು ನಿಮಗೆಲ್ಲ ಗೊತ್ತಿದೆ. ಈ ಮರದಡಿಯಲ್ಲಿ ನಾವೆಲ್ಲ ಅದ್ಭುತ ಜೀವನ ಪಾಠಗಳನ್ನು ಕಲಿತಿದ್ದೇವೆ. ಪಿಂಚಣಿಗಾಗಿ ಪೇಟೆಗೆ ಬಂದವರಿಂದ ಸ್ವಾತಂತ್ರ್ಯ ಹೋರಾಟದ ಕಥೆಗಳನ್ನು ಕೇಳಿ ರೋಮಾಂಚಿತರಾಗಿದ್ದೇವೆ. ಮಾಸ್ತರುಗಳು ಕಂಕುಳಲ್ಲಿಟ್ಟುಕೊಂಡ ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಲಂಕೇಶ್ ಪತ್ರಿಕೆಗಳನ್ನು ಸಲಿಗೆಯಿಂದ ಎಳೆದುಕೊಂಡು ಓದಿ ಸಾಮಾಜಿಕ- ರಾಜಕೀಯ ಸಂಗತಿಗಳನ್ನು ನಮ್ಮ ಪ್ರಜ್ಞೆಗಿಳಿಸಿಕೊಂಡಿದ್ದೇವೆ... ನಮ್ಮ ಮಧ್ಯಾಹ್ನದ ಹಸಿವೆಯ ಅರಿವಾಗಿ ಮಾರಲು ತಂದ ಕಾಡು ಹಣ್ಣುಗಳನ್ನು ತಿನ್ನಲು ಕೊಡುತ್ತಿದ್ದ ಹಾಲಕ್ಕಿ ಗೌಡ್ತಿಯರ ಪ್ರೀತಿಯನ್ನು ಉಂಡಿದ್ದೇವೆ. ಜಾಜಿ, ಮಲ್ಲಿಗೆ, ಅಬ್ಬರಿಗೆ ಹೂದಂಡೆಗಳನ್ನು ತಮ್ಮ ನಾಜೂಕು ಬೆರಳುಗಳಲ್ಲಿ ಹಿಡಿದು, ಹುಬ್ಬಿ-ಧರ್ಮಸ್ಥಳ-ಗೋವಾ ಕಡೆ ಹೋಗುವ ಬಸ್ಸುಗಳಿಗೆಲ್ಲ ಸುಗಂಧ ರವಾನಿಸುತ್ತಿದ್ದ ಪೋರಿಯರು ನಮ್ಮ ನೆನಪುಗಳಲ್ಲಿನ್ನೂ ಘಮಘಮಿಸುತ್ತಿದ್ದಾರೆ. ಇದಕ್ಕೆಲ್ಲ ಸಾಕ್ಷಿಯಾಗಿರುವ ಈ ಮರಕ್ಕೆ ಅಭಿವೃದ್ಧಿಯ ನೆಪದಲ್ಲಿ ಕೊಡಲಿ ಬೀಳುವ ಸಾಧ್ಯತೆಯಿದೆ. ಸಾಂಸ್ಕೃತಿಕ ಮಹತ್ವದ ಈ ವೃಕ್ಷದ ಸುರಕ್ಷತೆ ಬಗ್ಗೆ ನಾವು ಜಾಗೃತರಾಗಿರಬೇಕಾಗಿದೆ' ಎಂದು ಹೊಸಬಣ್ಣ ಭಾವನಾತ್ಮಕ ಪೀಠಿಕೆ ಬರೆದು ಪೋಸ್ಟ್ ಮಾಡಿದ್ದ.

ಅದಕ್ಕೆ ಒಳ್ಳೆಯ ಪ್ರತಿಕ್ರಿಯೆಗಳು ಬಂದಿದ್ದವು. ಆದರೆ ಸಾಗುವಾನಿ ಮರದ ನೆಪದಲ್ಲಿ ಶುರುವಾದ ಗ್ರುಪ್ಪಿನಲ್ಲಿರುವ ಹೆಚ್ಚಿನವರು ಕ್ಲಾಸಮೇಟುಗಳೇ ಆಗಿದ್ದರಿಂದ ಮುಂದೆ ಅದು, 'ಕೆನರಾ ಕಾಲೇಜ್ 1989 ಬಿಎಸ್ಸಿ ಬ್ಯಾಚ್' ಎಂದು ಮರುನಾಮಕರಣಗೊಂಡು, ಡಿಗ್ರಿ ನಂತರ ಎಲ್ಲೆಲ್ಲೋ ಚದುರಿ, ಸಂಪರ್ಕ ಕಳೆದು ಹೋಗಿದ್ದವರ ಪುನರ್ಮಿಲನಕ್ಕೆ ಕಾರಣವಾಗಿತ್ತು. ಈಗಿನ ವಾಸಸ್ಥಳ, ನೌಕರಿ, ಉದ್ಯೋಗ, ಮಕ್ಕಳು, ಹೈಯರ್ ಎಜುಕೇಶನ್ನು, ಫಾರಿನ್ ಡಿಗ್ರೀ, ಫ್ಯಾಮಿಲಿ ಫೋಟೋಗಳು - ಇತ್ಯಾದಿ ಇತ್ಯಾದಿ ಸಂಗತಿಗಳನ್ನು ಹುರುಪಿನಿಂದ, ಹೆಮ್ಮೆಯಿಂದ ಶೇರ್ ಮಾಡಿಕೊಂಡಿದ್ದರು. ಹಿಂದಿನ ಸಲಿಗೆ, ಆಪ್ತತೆಗೆ ಮರಳಿದ ನಂತರ ಕೆಲವರು ತಮ್ಮ ವೈಯಕ್ತಿಕ ಒಲವುಗಳನ್ನು, ರಾಜಕೀಯ ನಿಲುವುಗಳನ್ನು ಹಂಚಿಕೊಳ್ಳೋಕೆ ಶುರುಮಾಡಿದ್ದರು. ಗ್ರುಪ್ ಕ್ರಮೇಣ ಎಡ- ಬಲ ಅಂತಲೂ, ಭಕ್ತರು- ಭಂಜಕರು ಅಂತಲೂ ಸೀಳಿಕೊಂಡಿತು. ರಫೀಕ್ ಶೇಖ್, ರೋಸೀ ಡಿಸೋಜಾರಂಥ ಸಹಪಾಠಿಗಳು ಗ್ರುಪ್‌ನಲ್ಲಿರುವುದನ್ನು ಮರೆತು, ಅಸೂಕ್ಷ್ಮ ರೀತಿಯಲ್ಲಿ ಧಾರ್ಮಿಕ ಅಸಹನೆಯ ಮಾತುಗಳು ಪೋಸ್ಟ್ ಆಗುತ್ತಿದ್ದವು. ಧಾರ್ಮಿಕ, ರಾಜಕೀಯ ವಿಷಯಗಳಿಗೆ ಇದು ವೇದಿಕೆಯಲ್ಲ, ಎಂದು ಅಡ್ಮಿನ್ ಆಗಿ ಹೊಸಬಣ್ಣ ಸುಮಾರು ಸಲ ಎಚ್ಚರಿಸಬೇಕಾಯ್ತು. 'ಸಮಾಜದ ಕನ್ನಡಿಯಾಗಬೇಕಾದ ಸಾಯ್ತಿಗಳೇ ಹಿಂಗದ್ರೆ ಹೆಂಗೆ?', 'ಚಾಪ್ಲೂಟ್ ಹೊಸಬಣ್ಣ, ಬುದ್ಧಿ ಹೇಳುವಷ್ಟು ಬೆಳೆದನಣ್ಣ' ಎಂದೆಲ್ಲ ಹೊಸಬಣ್ಣ ಟ್ರೋಲ್ ಆಗಿದ್ದ.

ಹೊಸಬಣ್ಣ ಗ್ರುಪ್‌ನಲ್ಲಿ ಸಾಹಿತ್ಯದ ಬಗ್ಗೆ